# ಇಲ್ಲಿ ವಾಸ ಹಾಲು ಜೇನಿನಷ್ಟೇ ಮಧುರ!



ಡೆನ್ಮಾರ್ಕ್‌ನಿಂದ ಬಂದ ಪೀಟರ್-ಸೂಸನ್ ದಂಪತಿ ಜತೆಗೆ ಮಕ್ಕಳಾದ ಸಾರಾ ಮತ್ತು ಸೋಫಿ

ಹಾಲು, ಹಾಲಿನ ಉತ್ಪನ್ನಗಳಿಗೆ ಡೆನ್ಮಾರ್ಕ್ ವಿಶ್ವದಲ್ಲೇ ಹೆಸರಾದ ದೇಶ ಎಂಬ ಹೆಗ್ಗಳಿಕೆ ಗಳಿಸಿದೆ. ಇಲ್ಲಿ ಹಾಲಿನ ಉತ್ಪನ್ನಗಳು ಸಮೃದ್ಧ. ಇಂಥ ಸಮೃದ್ಧ ದೇಶದಿಂದ ಭಾರತಕ್ಕೆ ಬಂದ ವಿದೇಶಿ ದಂಪತಿ ಪೀಟರ್ ರೋಸೆನ್ ಮತ್ತು ಸೂಸನ್ ಬದುಕು ಕೂಡ ಹಾಲು ಜೇನಿನಷ್ಟೇ ಮಧುರವಾದದ್ದು.

ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೋಗಿ ನೆಲೆಸುವುದು ಎಂದರೆ ಅದು ಸುಲಭದ ಮಾತೇ?ಹೊಸ ಜಾಗ, ಹೊಸ ಪರಿಸರ ಹೇಗಿರುತ್ತದೋ ಏನೋ ಎಂಬ ಅಳುಕು ಸಹಜ, ಸಾಮಾನ್ಯ. ಡೆನ್ಮಾರ್ಕ್ ಮೂಲದ ಪೀಟರ್ ರೋಸೆನ್ ಮತ್ತು ಆತನ ಪತ್ನಿ ಸೂಸನ್ ಮಕ್ಕಳಾದ ಸಾರಾ ಮತ್ತು ಸೋಫಿ ಜತೆಗೆ ಎರಡು ವರ್ಷಗಳ ಹಿಂದೆಯೇ ಬೆಂಗಳೂರಿಗೆ ಬಂದು ನೆಲೆ ನಿಂತಿದ್ದಾರೆ. ಪೀಟರ್ ಸಾಫ್ಟ್‌ವೇರ್ ಕಂಪೆನಿ ಒಂದರಲ್ಲಿ ವ್ಯವಸ್ಥಾಪಕ ನಿರ್ದೇಶಕರು. ಇಲ್ಲಿಗೆ ಬರುವ ಮೊದಲು ಈ ಕುಟುಂಬ ಸ್ವಲ್ಪ ಸಮಯ ಸ್ವಿಟ್ಜರ್‌ಲಂಡ್‌ನಲ್ಲಿತ್ತು. ಅಲ್ಲಿರುವಾಗಲೇ ಯಾವುದಾದರೊಂದು ಹೊಸ ದೇಶಕ್ಕೆ ಹೋಗಿ ಕೆಲಸ ಮಾಡಬೇಕು ಎಂದು ಪತಿ–ಪತ್ನಿ ಇಬ್ಬರೂ ಚರ್ಚಿಸಿದ್ದರಂತೆ. ಕೊನೆಗೆ ಭಾರತವೇ ಸೂಕ್ತ ಎಂಬ ತೀರ್ಮಾನಕ್ಕೆ ಬಂದು ಇಲ್ಲಿಗೆ ಬರುವ ನಿರ್ಧಾರ ಕೈಗೊಂಡರಂತೆ.

ಪೀಟರ್ ಮಕ್ಕಳಿಗೂ ಬೇರೆ ಬೇರೆ ದೇಶ ಸುತ್ತುವುದು ಇಷ್ಟವಂತೆ. ಹಾಗಾಗಿ ಭಾರತಕ್ಕೆ ಬರಲು ಸಂತೋಷವಾಗಿ ಒಪ್ಪಿಕೊಂಡ ಕಾರಣ ಇಲ್ಲಿಗೆ ಬರುವುದು ಕಷ್ಟವೇ ಅನಿಸಲಿಲ್ಲವಂತೆ. ಆದರೆ ಈ ಕುಟುಂಬದ ಸದಸ್ಯರು ಬೆಂಗಳೂರಿನಲ್ಲೇ ಖಾಯಂ ನೆಲೆ ನಿಲ್ಲುವವರಲ್ಲ. ಪೀಟರ್ ಅವರದು ವರ್ಗಾವಣೆಯಾಗುವ ವೃತ್ತಿಯಾದ್ದರಿಂದ ಇವರು ಬೇರೆ ಬೇರೆ ದೇಶಗಳಿಗೆ ಹೋಗಲೇ ಬೇಕಾಗುತ್ತದೆ.

'ಡೆನ್ಮಾರ್ಕಿನ ಬ್ರೆಷ್ಟಿಂಗ್ ಎಂಬ ಸಣ್ಣ ಊರು ನಮ್ಮದು. ಇಡೀ ಊರಿನಲ್ಲಿ ಕೇವಲ 3000 ಜನ ಮಾತ್ರ ಇರುವುದು. ಇವರ ಮನೆ ಸಮುದ್ರ ತೀರದ ಸನಿಹವೇ ಇದ್ದುದರಿಂದ ನಮಗೆ ಉತ್ತಮ ಪರಿಸರ ಮತ್ತು ಶುದ್ಧ ಗಾಳಿ ಸಿಗುತ್ತಿತ್ತು. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಇಂಥ ಪರಿಸರ ಬೇಕು. ಊರಿನಲ್ಲಿ ಉತ್ತಮ ಶಾಲೆ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಪೂರಕವಾದ ವಾತಾವರಣ ಇದ್ದು, ಮಕ್ಕಳನ್ನು ಒಳ್ಳೆಯ ವಾತಾವರಣದಲ್ಲಿ ಬೆಳೆಸಲು ಸಾಧ್ಯವಾಯಿತು' ಎನ್ನುತ್ತಾರೆ ಪೀಟರ್.

ಇತ್ತೀಚೆಗೆ ಒಂದು ಸಿಹಿ ಸುದ್ದಿ ಇವರ ಊರಿನಿಂದ ಬಂದಿದೆ. ಡೆನ್ಮಾರ್ಕ್ ದೇಶ 'ಅತ್ಯಂತ ಹೆಚ್ಚು ಸಂತೋಷ, ಖುಷಿಯಿಂದ ಕೂಡಿರುವ ಜನರಿರುವ ದೇಶ' ಎಂಬುದನ್ನು ದಾಖಲಿಸಲಾಗಿದೆ. ಇದು ವಿಶ್ವದಾದ್ಯಂತ ಹೆಸರು ಗಳಿಸಿ ವಿದೇಶಿ ಮಂದಿ ಡೆನ್ಮಾರ್ಕ್‌ಗೆ ಪ್ರವಾಸ ಮಾಡುವ ನಿರ್ಧಾರ ಕೈಗೊಂಡಿದ್ದಾರಂತೆ.

'ಡೆನ್ಮಾರ್ಕ್‌ನ ಹವಾಮಾನ ಶೀತದಿಂದ ಕೂಡಿದ್ದು ಇಲ್ಲಿನ ಉತ್ತರ ಭಾಗದಲ್ಲಿ ಶೀತ ಇನ್ನೂ ಹೆಚ್ಚು. ಬೆಂಗಳೂರಿನ ಹವೆ ತುಂಬ ಚೆನ್ನಾಗಿದೆ. ತಂಪು ಪ್ರದೇಶದಿಂದ ಬಂದವರಾದ ಕಾರಣ ಇಲ್ಲಿನ ಹವಾಮಾನ ಚೆನ್ನಾಗಿ ಹಿಡಿಸಿದೆ' ಎನ್ನುತ್ತಾರೆ ಪೀಟರ್.

'ಭಾರತೀಯರು ಆಧ್ಯಾತ್ಮ ಮತ್ತು ಧರ್ಮಕ್ಕೆ ಹೆಚ್ಚು ಬೆಲೆ ಕೊಡುತ್ತಾರೆ. ಸಾಂಪ್ರದಾಯಿಕ ಮನೋಭಾವನೆ ಇಲ್ಲಿನವರಿಗೆ ಹೆಚ್ಚು. ಸಂಸ್ಕೃತಿ, ಆಚರಣೆ, ಪದ್ಧತಿಗೆ ಎಲ್ಲಿಲ್ಲದ ಮಹತ್ವ. ನೆರೆಹೊರೆಯವರ ಮೇಲೆ ಅಪಾರ ನಂಬಿಕೆ ಪ್ರೀತಿ. ಇತರರೊಡನೆ ಬೆರೆಯುವುದೂ ಅಷ್ಟೆ. ಸ್ನೇಹ, ಬಾಂಧವ್ಯ, ವಿಶ್ವಾಸಕ್ಕೆ ಇಲ್ಲಿ ಹೆಚ್ಚು ಬೆಲೆ ಕೊಡಲಾಗುತ್ತದೆ ಎಂಬುದನ್ನೂ ಗಮನಿಸಿದ್ದೇವೆ. ಆದರೆ ಡೆನ್ಮಾರ್ಕಿನಲ್ಲಿನ ಚಿತ್ರಣವೇ ಬೇರೆ. ಅಲ್ಲಿ ಈ ಪರಿಸ್ಥಿತಿ ಇಲ್ಲ, ಜನ ಬೇಗ ಬೆರೆಯುವುದಿಲ್ಲ. ಬಾಂಧವ್ಯ, ಒಡನಾಟ ಎಂಬುದೇ ಇಲ್ಲ' ಎಂದು ದೇಶ–ದೇಶಗಳ ನಡುವಿನ ಪರಿಸ್ಥಿತಿಯನ್ನು ತುಲನಾತ್ಮಕವಾಗಿ ವಿವರಿಸುತ್ತಾರೆ ಈ ದಂಪತಿ.

ಇಲ್ಲಿ ಹಬ್ಬಗಳ ಆಚರಣೆ ಅಂತೂ ವೈವಿಧ್ಯಮಯ. ಇದರ ಸೊಬಗಂತೂ ವರ್ಣಿಸಲು ಆಗದಷ್ಟು ಚೆನ್ನಾಗಿದೆ. ಉಡುಪುಗಳಲ್ಲೂ ತರಾವರಿ ವಿನ್ಯಾಸ. ಸಾಂಪ್ರದಾಯಿಕ ಕುರ್ತಾ ಸೂಸನ್‌ಗೆ ಇಷ್ಟವಂತೆ. ಮಕ್ಕಳೂ ಫ್ರಾಕ್, ಕುರ್ತಾ, ಸಲ್ವಾರ್ ಹಾಕಿಕೊಂಡು ಖುಷಿ ಪಡುತ್ತಾರಂತೆ.

## ಆಹಾರ ಕ್ರಮ

'ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಡೆನ್ಮಾರ್ಕ್ ಹೆಸರಾಗಿದೆ. ನಮ್ಮ ಆಹಾರ ಹೆಚ್ಚು ಆರೋಗ್ಯಕರ ಅಂಶಗಳಿಂದ ಕೂಡಿದೆ' ಎನ್ನುವ ಪೀಟರ್, 'ನಾವು ಹಾಲು, ಚೀಸ್, ಬೆಣ್ಣೆ, ತುಪ್ಪ ಯಥೇಚ್ಛವಾಗಿ ಬಳಸುತ್ತೇವೆ. ಭಾರತೀಯ ಆಹಾರ ಕ್ರಮಕ್ಕೂ ಡೆನ್ಮಾರ್ಕ್‌ನದ್ದಕ್ಕೂ ಬಹಳ ವ್ಯತ್ಯಾಸವಿದೆ. ಇಲ್ಲಿನ ಆಹಾರದಲ್ಲಿ ಹೆಚ್ಚು ಮಸಾಲೆ ಇರುತ್ತದೆ. ಆದರೆ ಇಲ್ಲಿ ಸಿಗುವ ಹಣ್ಣು ತರಕಾರಿಗಳು ಬಹಳ ಫ್ರೆಶ್ ಆಗಿರುತ್ತವೆ. ಹೋಟೆಲ್ ಊಟವೂ ಚೆನ್ನಾಗಿರುತ್ತದೆ' ಎನ್ನುತ್ತಾರೆ.

ಆದರೆ ಸೂಸನ್‌ಗೆ ಇಲ್ಲಿ ಮಸಾಲೆಯುಕ್ತ ಪದಾರ್ಥ, ತಿಂಡಿ–ತಿನಿಸು ಬಹಳ ಇಷ್ಟವಂತೆ. ದಕ್ಷಿಣ ಭಾರತೀಯ ತಿಂಡಿಗಳೂ ಅಷ್ಟೆ. ಅದರಲ್ಲೂ ಇಡ್ಲಿ, ದೋಸೆ ಎಂದರೆ ಬಹಳ ಪ್ರೀತಿ ಅಂತೆ. ಮಕ್ಕಳಿಬ್ಬರೂ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಓದುತ್ತಿದ್ದು, ಶಾಲೆಯ ವಾತಾವರಣವನ್ನು ಬಹಳ ಇಷ್ಟಪಡುತ್ತಾರಂತೆ.

★ ಅವನೀಶ್